ಶ್ರೀ ಅಲೂರು ಹನುಮಂತಪ್ಪ.—ಟ್ಯಾಂಕ್ ರಿಜಿನ್ಸರಿನಲ್ಲಿರತಕ್ಕ ಅಂಶಗಳನ್ನು ಆಧಾರವಾಗಿ ಟ್ಟುಕೊಂಡು 10 ಎಕರೆಗಿಂತ ಕೆಳಗೆ ಇರತಕ್ಕ ಕೆರೆಗಳನ್ನು, ಕಟ್ಟೆಗಳನ್ನು ತಾಲ್ಲೂಕು ಬೋರ್ಡಿಗೆ ವರ್ಗಾಣೆ ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಫ್ಲಡ್ ಡ್ಯಾಮೇಜಸ್ ಎಂದರೆ, ಯಾವುದಾದರೂ ಪ್ರದೇಶದಲ್ಲಿ ಹತ್ತಿಪ್ಪತ್ತು ವರ್ಷಗಳಿಗೊಮ್ಮೆ ಮಳೆ ಬಂದು ಕೆರೆಗಳು ಕಿತ್ತು ಹೋದರೆ ಅಂಥ ಕೆಲಸಗಳ ಫ್ಲಡ್ ಡ್ಯಾಮೇಜಸ್ ನಲ್ಲಿ ಬರುತ್ತವೆಯೇ? ಫ್ಲಡ್ ಡ್ಯಾಮೇಜಸ್ ಎಂದರೆ ಅರ್ಥವೇನು ಸ್ವಾಮಿ?

ಶ್ರೀ ಅಲೂರು ಹನುಮಂತಪ್ಪ.—ಫ್ಲಡ್ ಡ್ಯಾಮೇಜಸ್ ಎಂದರೆ ಕೆರೆ ಏರಿ ಮತ್ತು ಕೋಡಿಗೆ ನಷ್ಟವಾಗಿ, ನೀರು ನಿಲ್ಲದೆ ಅನಾಹುತವಾಗತಕ್ಕ ಸಂದರ್ಭಗಳು ಬರುತ್ತವೆ. ಫ್ಲಡ್ ಡಾಮೇಜಸ್ ನಲ್ಲಿ. ದೊಡ್ಡ ಕೆಲಸಗಳನ್ನು ತಗೆದುಕೊಳ್ಳುವುದಕ್ಕೆ ಹಣವಿಲ್ಲದೆ ಇರುವುದರಿಂದ ಈ ಕೆರೆಗಳನ್ನೆಲ್ಲ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ರೆವೆನ್ಯೂ ಇಲಾಖೆಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾವಣೆ ಮಾಡಿಕೊಂಡು ಕೆಲಸ ಮಾಡಿಸುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಫ್ಲಡ್ ಡ್ಯಾಮೇಜ್ ವರ್ಕ್ಸ್‌ಗಾಗಿ 17-18 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಂದ್ರವನ್ನು ಯಾವ ತಾರೀಖಿನಲ್ಲಿ ಕೇಳಿದ್ದಾರೆ. ಆ ಹಣವನ್ನು ಅವರು ಕೊಟ್ಟಿದ್ದಾರೆಯೇ, ಆ ಹಣ ಬರುವುದಕ್ಕೆ ಇನ್ನು ಎಷ್ಟು ದಿವಸವಾಗುತ್ತದೆ?

ಶ್ರೀ ಅಲೂರು ಹನುಮಂತಪ್ಪ.—ಮೂರನೆ ಯೋಜನೆಯಲ್ಲಿ ಹಣ ಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೆವು. ನಮ್ಮ ಸ್ಟೇಟ್ ಸೀಲಿಂಗ್ ಒಳಗೆ ಅವನ್ನೂ ಅಳವಡಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ರಾಜ್ಯದ ಯೋಜನೆಗಳಿಗೆ ಹೊರಪಟ್ಟಂತೆ ಈ ಹಣವನ್ನು ಕೊಡಬೇಕೆಂದು ಕೇಳುತ್ತಿದ್ದೇವೆ. ಅದು ಇನ್ನೂ ಅವರ ಪರಿಶೀಲನೆಯಲ್ಲಿದೆ.

Lift Irrigation Schemes.

*Q.—117. Sri ANDANAIAH (Kunigal).—

Will the Minister for Public Works be pleased to state :—

(*a*) the number of Lift Irrigation Schemes prepared by the State Government up to date;

(*b*) the number of Schemes sent to Goveanment of India for approval;

(*c*) how many of them were approved by the Central Government finally (districtwise information may be given);

(*d*) the estimated cost of the adove Schemes?

A.—Sri ALUR HANUMANTHAPPA (Deputy Minister for Minor Irrigation).—

(*a*) 269.

(*b*) 112.

(*c*) 31 (*Vide* statement appended).

(*d*) The estimated cost of the approved Schemes is Rs. 41,03,800.

(Sri Alur Hanumanthappa)

STATEMENT

Showing the number of Lift Irrigation Schemes sanctioned by Government of India.

	Name of District	No. of schemes approved by Government of India	
		No.	*Cost* Rs.
1	Bangalore ...	...	...
2	Kolar ...	...	...
3	Tumkur ...	...	...
4	Mysore ...	...	...
5	Mandya ...	...	...
6	Shimoga ...	...	...
7	Chickmagalur ...	...	...
8	Hassan ...	...	...
9	Chitradurga ...	...	...
10	Belgaum ...	1	1,02,100
11	Bijapur ...	1	92,000
12	Dharwar ...	3	6,96,200
13	North Kanara ...	...	...
14	South Kanara ...	12	11,69,500
15	Coorg ...	...	...
16	Gulbarga ...	4	7,06,400
17	Raichur ...	4	7,35,000
18	Bidar ...	...	...
19	Bellary ...	6	6,02,600
	Total ...	31	41,03,800

ಶ್ರೀ ಆಂದಾನಯ್ಯ.—41 ಲಕ್ಷ ರೂಪಾಯಿಗಳ ಖರ್ಚಿನಲ್ಲಿ 31 ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿದ್ದಾರೆಂದು ಹೇಳಿದ್ದಾರೆ. ಇದರಡಿ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ ಹಳೆ ಮೈಸೂರು ಭಾಗಕ್ಕೆ ಯಾವ ಜಿಲ್ಲೆಯಲ್ಲಿಯೂ ಒಂದು ಯೋಜನೆಯೂ ಕಾಣುವುದಿಲ್ಲ. ಇದಕ್ಕೆ ಕಾರಣವಾದರೂ ಏನು ?

† ಶ್ರೀ ಆಲೂರು ಹನುಮಂತಪ್ಪ.—ಇತ್ತೀಚೆಗೆ ದೇಶದಲ್ಲಿ ಉಂಟಾದ ಅಭಾವ ಪರಿಸ್ಥಿತಿಯನ್ನು ಮನಗಂಡು ಸರ್ಕಾರ 62 ಯೋಜನೆಗಳನ್ನು ಮಂಜೂರು ಮಾಡಿದೆ. ಕೇಂದ್ರ ಸರ್ಕಾರದಿಂದ 31 ಯೋಜನೆಗಳು ಮಂಜೂರಾಗಿ ಬಂದ ಮೇಲೆ 62 ಯೋಜನೆಗಳನ್ನು ರಾಜ್ಯ ಸರ್ಕಾರ ಮಂಜೂರು ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಂಜೂರು ಮಾಡಬೇಕಾದರೆ ಏನೇನು ಗುಣಾವಗುಣಗಳು ಇರಬೇಕು, ಏನು ಅರ್ಹತೆ ಇರಬೇಕು ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರ ಸರ್ಕಾರಕ್ಕೆ ಮೊದಲು 112 ಯೋಜನೆಗಳನ್ನು ಕಳುಹಿಸಿಕೊಟ್ಟಿದ್ದೆವು. Lift should not exceed more than 50 feet Maintenance cost should not be more than Rs. 40 per acre. Capital cost should be between 350 and 400 rupees per acre. ಈ ಮೂರು ಕಂಡಿಷನ್‌ಗಳ ಮೇಲೆ ಕೇಂದ್ರ ಸರ್ಕಾರದವರು 31 ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಇತ್ತೀಚೆಗೆ 62 ಯೋಜನೆಗಳನ್ನು ನಾವು ಮಂಜೂರು ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್‌ಗೋಸ್ಕರ ಎರಡು ಯೋಜನೆಗಳು ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಬಡ್ಜೆಟ್‌ನಲ್ಲಿ ಕೂಡ ಸೇರಿಸಲ್ಪಟ್ಟಿದ್ದು, ಈಗ ಮಾನ್ಯ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಅದರಲ್ಲಿ ಕಾಣುತ್ತಿಲ್ಲ. ಇದಕ್ಕೆ ಕಾರಣವೇನು, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ —ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ 31 ಯೋಜನೆಗಳಲ್ಲಿ ಅವು ಬರಲಿಲ್ಲ. ಈಗ ಮಾಡಿರುವ ಪಟ್ಟಿಯ ಪ್ರಕಾರ 194 ಹೊಸ ಯೋಜನೆಗಳು ಸಿದ್ಧವಾಗಿವೆ. ಅದರಲ್ಲಿ ಮೈಸೂರು ಜಿಲ್ಲೆಯ ವಿವರವನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ಈಗ ಮಂಜೂರಾಗಿರುವ 31 ಯೋಜನೆಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಒಂದೂ ಕೂಡ ಮಂಜೂರಾಗಿಲ್ಲದೆ ಇರಲು ಕಾರಣವೇನು, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಇದಕ್ಕೆ ಉತ್ತರವನ್ನು ನಭೆಗೆ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದವರು ಹಾಕಿರುವ ಮೂರು ನಿಯಮಗಳಿಗೆ ಯಾವುವು ಒಳಪಡಲಿಲ್ಲವೋ ಅವುಗಳ ಮಂಜೂರಾತಿಯಾಗಿಲ್ಲ. ಅದಕ್ಕಾಗಿ 62 ಯೋಜನೆಗಳನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರ ಮಂಜೂರು ಮಾಡಿದೆ. ಇದರ ಜೊತೆಗೆ ಈಗ ಹೊಸದಾಗಿ ತಯಾರಾಗಿರುವ 194 ಯೋಜನೆಗಳ ಪಟ್ಟಿಯಲ್ಲಿ ಎಲ್ಲ ಜಿಲ್ಲೆಗಳ ಪ್ರಾತಿನಿಧ್ಯವೂ ಇರಬೇಕೆಂದು ಸಿದ್ಧಪಡಿಸಿಕೊಂಡಿದ್ದೇವೆ.

ಶ್ರೀ ಎ. ಮಸಿಯಪ್ಪ.—ಈಗ ಮಂಜೂರಾಗಿರುವ ಯೋಜನೆಗಳಿಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧ ಪಟ್ಟ ಹಾಗೆ ಎಷ್ಟು ಇವೆ, ಅವು ಯಾವುವು ಎಂದು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರದಿಂದ ಮಂಜೂರಾಗಿರುವ 31 ಯೋಜನೆಗಳಲ್ಲಲ್ಲ. ಈಗಾಗಲೇ ಸರ್ಕಾರ ಮಂಜೂರು ಮಾಡಿರುವ 62 ಯೋಜನೆಗಳಲ್ಲ 14 ಲಕ್ಷ ರೂಪಾಯಿ ವೆಚ್ಚದಲ್ಲಿ 13 ಯೋಜನೆಗಳನ್ನು ಆಳವಡಿಸಿಕೊಂಡಿದ್ದೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ರಾಯಚೂರು ಜಿಲ್ಲೆಯಲ್ಲಿ ಮಂಜೂರಾಗಿರುವ ನಾಲ್ಕು ಯೋಜನೆಗಳ ಪ್ರಕಾರ ಯಾವ ಯಾವ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

Sri ALUR HANUMANTHAPPA.—It is a big list...

Mr. SPEAKER.—If it is a long list, please place it on the Table of the House.

Sri ALUR HANUMANTHAPPA.—Yes. Sir, I will place it.

Mr. SPEAKER.—Information relating to furthur details can be gathered from the list that will be placed on the Table of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಮಾಡಿರುವ 61 ಯೋಜನೆಗಳ ಬಗ್ಗೆ ಏನೇನು ಅರ್ಹತೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಯ್ತು? ಅವುಗಳ ಪೈಕಿ ಯಾವ ಯಾವುದನ್ನು ಯಾವ ಯಾವ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ಕೇಂದ್ರ ಸರಕಾರದವರು ಹಾಕಿರುವ ಷರತ್ತುಗಳನ್ನು ಗಣನೆಗೆ ತೆಗೆದುಕೊಂಡರೆ ಬಹಳ ತೊಂದರೆಯಾಗುತ್ತದೆ ಎಂದು ರಾಜ್ಯ ಸರಕಾರ ಅದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿ ಈಗ 62 ಯೋಜನೆಗಳನ್ನು ಮಂಜೂರು ಮಾಡಿದ್ದೇವೆ. ಕ್ಯಾಜಿನೆಟ್ ಸಬ್ ಕಮಿಟಿಯಲ್ಲಿ ಈ ವಿಷಯ ತೀವ್ರವಾಗಿ ಚರ್ಚೆಯಾಗಿ ಯಾವ ಜಿಲ್ಲೆಯಲ್ಲಿ ಎಷ್ಟು ತೆಗೆದುಕೊಳ್ಳಲು ಸಾಧ್ಯ ಮತ್ತು ಅದಕ್ಕೆ ಹಣವ ಅವಶ್ಯಕತೆಯೆಷ್ಟು ಎಂಬುದು ಪರಿಶೀಲನೆಯಲ್ಲಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅರಳಗುಪ್ಪೆ ಗ್ರಾಮದಲ್ಲಿ ವಿ. ಸಿ. ಫಾನರ್ ನೀರು ಬರುವುದಿಲ್ಲ, ಅದಕ್ಕೆ ಅಲ್ಲಿ ಲಿಫ್ಟ್ ಇರಿಗೇಷನ್ ಅನುಕೂಲ ಕಲ್ಪಿಸುತ್ತೇವೆ, ಅದಕ್ಕೆ ಅದ್ಯತೆ ಕೊಡುತ್ತೇವೆ ಎಂದು ವಾಗ್ದಾನ ಮಾಡಿದ್ದರು ಆ ಯೋಜನೆ ಮಂತ್ರಿಗಳು ಹೇಳಿದ್ದರಲ್ಲಿ ಸೇರಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಪರಿಶೀಲಿಸುತ್ತೇವೆ.

Mr. SPEAKER.—I find a very large number of members anxious about this question; I want to help them. What I suggest is, the list will be placed on the table of the House and members may go through it and we shall take this question again tomorrow.

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನ ಯೋಜನೆಯನ್ನು ಕಳೆದ 2 ವರ್ಷಗಳಿಂದ ಬಜೆಟ್ಟಿನಲ್ಲಿ ಸೇರಿಸಿದ್ದರೂ ಕೂಡ ಅದನ್ನು ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಸಹಕಾರ ಸಂಘದ ಪತಿಯಿಂದ ಮಾಡಿಸಬೇಕೆಂಬ ಅಭಿಪ್ರಾಯವಿತ್ತು. ಆದರೆ ರಾಜ್ಯ ಸರಕಾರ ಅದರ ಅವಶ್ಯಕತೆಯನ್ನು ಅರಿತು ಪಿ. ಡಬ್ಲ್ಯೂ ಡಿ. ಇಲಾಖೆಯಿಂದ ಆ ಕೆಲಸಕಾರ್ಯ ಮಾಡಿಸಬೇಕೆಂದು ತೀರ್ಮಾನ ಮಾಡಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಆ ಬಗ್ಗೆ ಆದೇಶ ಕೊಡಲಾಗಿದೆ. ಟಿ. ನರಸೀಪುರದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ,

ಶ್ರೀ ಎಸ್. ನಿಜಲಿಂಗಪ್ಪ.—ಮುಖ್ಯ ಮಂತ್ರಿಗಳು ಪಿ. ಡಬ್ಲ್ಯೂ ಇಲಾಖೆಯವರು ಕೋ ಆಪರೇಟಿವ್ ಸೊಸೈಟಿಗಳವರು ಮಾಡದಿದ್ದರೆ ಈ ಯೋಜನೆಗಳ ಕೆಲಸವನ್ನು ವಹಿಸಿಕೊಂಡು ಮಾಡುತ್ತಾರೆ. ಸೊಸೈಟಿಗಳವರು ಮಾಡಿದರೆ ಸಂತೋಷ. ಇದಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಇಲ್ಲಿ ಸಭೆಯಲ್ಲಿ ಹೇಳುವುದಕ್ಕಿಂತ ಮಾನ್ಯ ಸದಸ್ಯರು ನನ್ನ ಬಳಿ ಬಂದು ವಿಶದವಾಗಿ ಹೇಳಿದರೆ ಒಳ್ಳೆಯದು. ಅದಕ್ಕೆ, ನಾನು ಅವಕಾಶ ಕೊಡುತ್ತೇನೆ, ಪ್ರತಿ ಜಿಲ್ಲೆಯವರೂ ಬಂದು ಇಂಥ ಕಡೆ ಅನುಕೂಲವಿದೆ, ಮಾಡಬೇಕೆಂದು ಹೇಳಿದರೆ ಸರಕಾರ ಅದನ್ನು ಪರಿಶೀಲಿಸಿ ತೆಗೆದುಕೊಳ್ಳಲು ತಯಾರಾಗಿದೆ.

Mr. SPEAKER.—House will not be able to find time to discuss every minor detail and its pros and cons. The suggestion of the Chief Minister will give the greatest facility. I would suggest that the hon. Members may kindly prepare a list and send it to him so that when they go to him, the reactions would be ready. If they do that, it would be better. The further question is, whether this question should be held over. In view of the suggestion by the Chief Minister, I do not know why it should be held-over. Any way, this question will be taken up when we meet next. In the mean while, the list may be placed on the Table of the House.

ಶ್ರೀ ಜೆ. ದೇವಯ್ಯ.—ಮುಖ್ಯ ಮಂತ್ರಿಗಳು ಪ್ರತಿ ಜಿಲ್ಲೆಯವರು ಬಂದು ತಮ್ಮ ಕುಂದು ಕೊರತೆಗಳನ್ನು ತಿಳಿಸಲು ಅವಕಾಶ ಕೊಡುವುದಾಗಿ ತಿಳಿಸಿದರು. ಹಿಂದೆ ಈ ಅವಕಾಶವಿತ್ತು. ಅವರು ಪುನಃ ಆದೇ ರೀತಿ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಇದು ಪ್ರತ್ಯೋತ್ತರಗಳ ಕಾಲವಾದ್ದರಿಂದ ಅದನ್ನೆಲ್ಲಾ ಹೇಳಲು ಅವಕಾಶವಿಲ್ಲ.